ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:-	1260 (1333)
ಸದಸ್ಯರ ಹೆಸರು:	ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ಸಚಿವರು:	ಮಾನ್ಯ ಕಂದಾಯ ಸಚಿವರು
ಉತ್ತರಿಸಬೇಕಾದ ದಿನಾಂಕ:-	19.03.2025

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಯಚೂರು ಜಿಲ್ಲೆಯ ಲಿಂಗಸೂರು ತಾಲ್ಲೂಕಿನ ತಹಶೀಲ್ದಾರ್ ಕಛೇರಿಯಲ್ಲಿ ನಡೆದ 1 ಕೋಟಿ 87 ಲಕ್ಷದ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಹೌದು, ಬಂದಿದೆ.
(ಆ)	ಬಂದಿದ್ದಲ್ಲಿ, 1ಕೋಟಿ 87 ಲಕ್ಷ ಹಣದ ದುರುಪಯೋಗದ ಬಗ್ಗೆ ಸರ್ಕಾರ ಯಾವ-ಯಾವ ಕ್ರಮ ಕೈಗೊಂಡಿದೆ: (ಸಂಪೂರ್ಣ ಮಾಹಿತಿ ಒದಗಿಸುವುದು)	ಲಿಂಗಸುಗೂರು ತಾಲೂಕಿನ ತಹಶೀಲ್ದಾರ ಕಚೇರಿಯ ಪ್ರಕೃತಿ ವಿಕೋಪ ಸಂಕಲನ ಮತ್ತು ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಅನುದಾನದ ಹಣ ದುರುಪಯೋಗ ಆಗದಂತೆ ಆರೋಪಿತ ಸಿಬ್ಬಂದಿಯ ವಿರುದ್ಧ ಪೊಲೀಸ್ ಪ್ರಕರಣ ಸಂಖ್ಯೆ 44/2025 ದಾಖಲಿಸಿದ್ದು ಸದರಿ ಆರೋಪಿತ ಸಿಬ್ಬಂದಿಯ ವಿರುದ್ಧ ಶಿಸ್ತು ಕ್ರಮ ಜರುಗಿಸಿ ಅಮಾನತ್ತಿನಲ್ಲಿ ಇಡಲಾಗಿರುತ್ತದೆ. ಹಾಗೂ ಅರೋಪಿತರ ಎಲ್ಲಾ ಬ್ಯಾಂಕ್ ಖಾತೆಗಳನ್ನು ಸಂಪೂರ್ಣವಾಗಿ ಫ್ರೀಜ್ ಮಾಡಿ ಸರ್ಕಾರದ ಹಣವನ್ನು ಸುರಕ್ಷಿತವಾಗಿ ಇಡಲಾಗಿರುತ್ತದೆ.
(ಇ)	ಲಿಂಗಸಗೂರು ತಾಲ್ಲೂಕು ತಹಶೀಲ್ದಾರ್ ಕಛೇರಿಗೆ ಪ್ರಕೃತಿ ವಿಕೋಪದಡಿ ತಾಲ್ಲೂಕಿಗೆ ಒಟ್ಟು ಅನುದಾನ ಎಷ್ಟು:	ಖಜಾನೆ-2 ರನ್ವಯ ದಿನಾಂಕ:- 23.06.2023 ರಂದು ಒಟ್ಟು ರೂ.52,12,764/- ಅನುದಾನವಿರುತ್ತದೆ. ಮುಂದುವರೆದು, ತಹಶೀಲ್ದಾರ ಲಿಂಗಸುಗೂರು ಇವರ ಹೆಸರಿನಲ್ಲಿ ಪ್ರಕೃತಿ ವಿಕೋಪ ಸಂಕಲನದ ಬ್ಯಾಂಕ್ ಖಾತೆ ಸಂಖ್ಯೆ:-4210101002942 ಯಲ್ಲಿ ದಿನಾಂಕ-09/01/2025 ರ ಅಂತ್ಯಕ್ಕೆ ಉಪಯೋಗಿಸದ ಒಟ್ಟು ಮೊತ್ತ ರೂ. 22,02,206/- ಇರುತ್ತದೆ. ಪ್ರಕೃತಿ ವಿಕೋಪದ ಎಲ್ಲಾ ಪ್ರಕರಣಗಳಿಗೆ ಖಜಾನೆ-2 ಮೂಲಕವೇ ಹಣ ವರ್ಗಾವಣೆಯಾಗುತ್ತದೆ.
(ಈ)	ಆ ಪೈಕಿ ಖರ್ಚಾದ ಹಾಗೂ ಉಳಿಕೆಯಾಗಿರುವ ಮೊತ್ತ ಎಷ್ಟು? (ಸಂಪೂರ್ಣ ಮಾಹಿತಿ ಒದಗಿಸುವುದು)	ಖಜಾನೆ-2ರನ್ವಯ ಖರ್ಚಾದ ಅನುದಾನ ಒಟ್ಟು ಮೊತ್ತ ರೂ.50,06,108/- ಹಾಗೂ ಉಳಿದ ಮೊತ್ತ ರೂ.2,06,656/-

ಸಂಖ್ಯೆ: ಕಂಇ 115 ಎಎಸ್‌ಡಿ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು